## ಮೂರು

ಲೈಬ್ರರಿಯನ್ ಸಿದ್ಧರಾಜುಗೂ ನನಗೂ ಬೇಗನೆ ಸೌಹಾರ್ದ ಬೆಳೆಯಲು ಎರಡು ಕಾರಣಗಳಿದ್ದವು. ಒಂದು ಅವರಿಗೂ ನನಗೂ ವಯಸ್ಸಿನಲ್ಲಿ ಅಂತಹ ಭಾರಿ ವ್ಯತ್ಯಾಸವಿರಲಿಲ್ಲ. ಎರಡನೆಯದಾಗಿ ಅವರೂ ನನ್ನಂತೆ ಹಾಸನದ ಕಡೆಯವರು. ಈಗ ಅವರ ಕುಟುಂಬ ನಗರದ ಮೂಲನಿವಾಸಿಗಳಂತೆ ಇಲ್ಲಿನವರೊಂದಿಗೆ ಬೆರೆತು ಹೋಗಿದೆ. ಸಿದ್ಧರಾಜುಗೆ ಇನ್ನೂ ಕಂಕಣ ಕೂಡಿ ಬಂದಿಲ್ಲ. ನನ್ನನ್ನೂ ವಿಚಾರಿಸಿದರು. ನಮ್ಮ ಆಚಾರಿಗಳ ಪೈಕಿ ಬೆಸ್ಟ್ ಹೆಣ್ಣಿದ್ದರೆ ಹೇಳು ಅಂತ. 'ಬೇಸರ ಮಾಡ್ಕಬ್ಯಾಡಿ, ಅಂದ್ಹಾಗೆ ನಿಮ್ಮ ಕ್ಯಾಶ್ಟು ಯಾವ್ದು?' ಸಿದ್ಧರಾಜು ಎರಡನೇ ದಿನವೇ ಈ ಮಾತು ಕೇಳಿದಾಗ ನಾನು ಬರಿದೆ ನಕ್ಕೆನಾದರೂ ಏನೂ ಹೇಳಲಿಲ್ಲ.

ಸಿದ್ಧರಾಜು ಕಾಲೇಜಿಗೆ ಬರುವುದು ಯಾವತ್ತೂ ಸ್ವಲ್ಪ ನಿಧಾನವೇ. ನಾನು ಬೆಳಿಗ್ಗೆ ಒಂಬತ್ತು ಗಂಟೆಗೆ ಗ್ರಂಥಾಲಯದ ಬಾಗಿಲು ತೆಗೆದು ಅಂದಿನ ದಿನಪತ್ರಿಕೆಗಳಿಗೆ ಸೀಲು ಹಾಕಿ ಓರಣವಾಗಿಡುವ ವೇಳೆಗೆ ಚಪರಾಸಿ ಮಂದಾಕಿನಿ ಬಂದಿರುತ್ತಾಳೆ. ನೀಟಾಗಿ ಒಂದು ಕಡೆಯಿಂದ ಕಸ ಗುಡಿಸಿ, ಕುಡಿಯುವ ನೀರನ್ನು ತಂದಿಟ್ಟು, ಸಿದ್ಧರಾಜು ಟೇಬಲ್ ಸಾಫು ಮಾಡಿ ಓರಣವಾಗಿಡುವುದು ಅವಳ ಕೆಲಸ. ಪತ್ರಿಕೆ, ಮಾಸಿಕಗಳನ್ನು ತಿರುವಿ ಹಾಕಲು ವಿದ್ಯಾರ್ಥಿ, ಪ್ರೊಫೆಸರುಗಳು ಆ ಹೊತ್ತಿಗೆ ಬರುತ್ತಾರೆ. ಚುಟುಕಾಗಿ ಕಣ್ಣಾಡಿಸಿ ಅವರು ಹೊರಟು ಹೋಗುತ್ತಾರೆ; ಕ್ಲಾಸುಗಳಿಗೆ ಸಮಯವಾಯಿತೆಂದು. ಮಧ್ಯಾಹ್ನದ ಊಟದ ಸಮಯದಲ್ಲಿ ಅಥವಾ ಲೀಜರ್‌ನಲ್ಲಿ ಬಂದು ಬೇಕಾದ ಪುಸ್ತಕಗಳನ್ನು ಪಡೆಯುವುದುಂಟು. ವಿದ್ಯಾರ್ಥಿಗಳಿಗಂತೂ ಸಮಯದ ಪರಿವೇ ಇಲ್ಲ. ಶಿಸ್ತೂ ಇಲ್ಲ. ಅವರು ಬಂದಾಗೆಲ್ಲಾ ಕೊಡುವುದು, ಪಡೆಯುವುದು, ಎಂಟ್ರಿ ಮಾಡಿಕೊಳ್ಳುವುದು ನಡೆದೇ ಇರುತ್ತದೆ. ಸಿದ್ಧರಾಜು ಕೆಲಸವನ್ನು ಬಹುಪಾಲು ನಾನೇ ಮಾಡುತ್ತೇನೆ. ಅವರು ಬಂದರೂ ಕುರ್ಚಿಯಲ್ಲಿ ಹೆಚ್ಚು ಹೊತ್ತು ಕೂರುತ್ತಿರಲಿಲ್ಲ. ಅವರಿಗೆ ಏನೇನೋ ವ್ಯವಹಾರಗಳಿವೆ. ಸಂಜೆ ಐದಕ್ಕೆ ಖುದ್ದು ನಾನೇ ಬಾಗಿಲು ಹಾಕಿ ಪ್ರಿನ್ಸಿಪಾಲರ ಕಚೇರಿಗೆ ಕೀ ಕೊಟ್ಟು ನನ್ನ ಕೋಣೆಗೆ ನಡೆದುಹೋಗುತ್ತೇನೆ. ಆಸಕ್ತಿ ಹುಟ್ಟಿಸುವ ಪುಸ್ತಕ, ಮ್ಯಾಗಝೀನುಗಳನ್ನು ಕೋಣೆಗೊಯ್ದು ಓದುವ ರುಚಿ ಕ್ರಮೇಣ ನನ್ನಲ್ಲಿ ಬೆಳೆಯಿತು. ಕಥೆಗಳು ನನಗೆ ತುಂಬಾ ಸೇರುತ್ತವೆ.

ನಮ್ಮ ಗ್ರಂಥಾಲಯದ ಚಪರಾಸಿ ಮಂದಾಕಿನಿ ಹೆಚ್ಚು ಮಾತಾಡದೇ ಒಂದು ನಮೂನೆ ದುಃಖಿಯಂತೆ ಕಾಣುವವಳು. ಸ್ವಲ್ಪ ಸಮಯದಲ್ಲಿ ನನಗೆ ಎರಡು ಆಶ್ಚರ್ಯಕರ ಸಂಗತಿಗಳು ಗೊತ್ತಾದವು. ಮಂದಾಕಿನಿಯ ಮನೆ ನಾನು ವಾಸ ಇರುವ ಭಾಗವತ ಸುಬ್ಬರಾಯರ ರಸ್ತೆಯಲ್ಲಿಯೇ ಇರುವುದು ಒಂದಾದರೆ, ಅವಳ ತಂದೆ ನಮ್ಮ ಕಾಲೇಜಿನಲ್ಲಿ ಈ ಹಿಂದೆ ಇಂಗ್ಲಿಷ್ ಪ್ರೊಫೆಸರ್ ಆಗಿದ್ದರೆಂಬುದು ಇನ್ನೊಂದು. ಅವರ ಪಾಠ ಕೇಳಿದ ವಿದ್ಯಾರ್ಥಿಗಳು ಇವತ್ತಿಗೂ ಪ್ರಪಂಚದ ಬೇರೆ ಬೇರೆ ಕಡೆಗಳಲ್ಲಿದ್ದಾರಂತೆ. ದೊಡ್ಡ ದೊಡ್ಡ ಸಂಬಳದ ಉನ್ನತ ನೌಕರಿಗಳನ್ನು ಹಿಡಿದಿದ್ದಾರಂತೆ. ಅವರ ಹೆಸರು ಎಸ್.ಆರ್. ಸುಂದರಮೂರ್ತಿ ಎಂದು ಅವಳೇ ಹೇಳಿದಳು. ಇದನ್ನು ಹೇಳುವಾಗ ಅವಳಿಗೆ ತನ್ನ ತಂದೆಯ ಬಗ್ಗೆ ಅಪಾರ ಹೆಮ್ಮೆ ಹಾಗೂ ಅಗಣಿತ ಆನಂದ ಆದ ಹಾಗೇ ನನಗೆ ತೋರಿತು.

ಸಿದ್ಧರಾಜು ಬಳಿ ನಾನು ಇದನ್ನು ಕೇಳಿದೆ. ಅವರೂ ಇದನ್ನು ಕೇಳಿದ್ದರಂತೆ. ಅಲ್ಲದೆ ಇನ್ನೂ ಒಂದೆರಡು ಸಂಗತಿಗಳನ್ನು ಅರುಹಿದರು. ಸುಂದರಮೂರ್ತಿ ಸರ್ ನಮ್ಮ ಕಾಲೇಜು ಮ್ಯಾಗಝೀನ್ 'ಕಣಗಿಲೆ' ಎಡಿಟರ್ ಆಗಿದ್ದರಂತೆ. ಅವರು ಸ್ವತಃ ತುಂಬಾ ಬರೆಯುತ್ತಿದ್ದರಂತೆ. ಅವರ ಲೇಖನಗಳನ್ನು ಕಾಲೇಜಿನ ಬಾಕಿ ಪ್ರೊಫೆಸರ್‌ಗಳು ಮಾತ್ರವಲ್ಲ ವಿದ್ಯಾರ್ಥಿಗಳೂ ಮೆಚ್ಚುತ್ತಿದ್ದರಂತೆ. ಮ್ಯಾಗಝೀನಿಗೆಂದು ಅವರು ಒಂದು ಧಾರಾವಾಹಿಯನ್ನೂ ಬರೆಯುತ್ತಿದ್ದರಂತೆ. ಅದರ ಮುಂದಿನ ಭಾಗ ಏನಾಗಲಿದೆ ಎಂದು ಈಗಲೇ ಹೇಳಿ ಎಂದು ಅವರನ್ನು ಇವರೆಲ್ಲ ಪೀಡಿಸೋರಂತೆ. ಎಂಥದೋ